

# ಬಾಳಪ್ಪ ಬದಲಾದ

**ಅರುಣಾ ನರೇಂದ್ರ**

ಕಲೆ: ಗಣೇಶ ಆಚಾರ್ಯ

ಒಂದು ಊರಿನಲ್ಲಿ ಬಾಳಪ್ಪ ಎಂಬುವನು ಹೆಂಡತಿ ಮಗನೊಂದಿಗೆ ವಾಸವಾಗಿದ್ದ. ಅವನಿಗಿದ್ದ ಅಲ್ಪ ಸ್ವಲ್ಪ ಹೊಲವನ್ನು ಕೂಡ ಅವನ ದಾಯಾದಿಗಳು ಕಸಿದುಕೊಂಡಿದ್ದರಿಂದ ಆತನ ಕುಟುಂಬ ತುತ್ತು ಅನ್ನಕ್ಕಾಗಿ ಪರದಾಡುವಂತಾಯಿತು.

ಬಾಳಪ್ಪನ ಹೆಂಡತಿ ಅವನಿಗೆ, 'ನೀವು ಹೀಗೆ ಚಿಂತಿಸುತ್ತಾ ಕುಳಿತರೆ ಹೇಗೆ? ಯಾವುದಾದರೂ ಕೆಲಸ ಮಾಡಿ. ಇಲ್ಲದಿದ್ದರೆ ಮಗನನ್ನೂ ಉಪವಾಸ ಹಾಕಬೇಕಾಗುವುದು' ಎಂದಳು. ಬಾಳಪ್ಪನಿಗೆ ಬಹಳ